ಶ್ರೀ ಕೆ. ರಾಮಭಟ್.—ನಾನು ಸರ್ಕಾರಿ ಅಧಿಕಾರಿಗಳನ್ನು ಕೇಳಿದ್ದು ಅಲ್ಲ. ನಾನು ಕೇಳಿದ್ದು ಸೊಸೈಟಿ ನೌಕರರ ಬಗ್ಗೆ ಕೇಳಿದ್ದು. ನಾನು ಕೇಳಿದ್ದನ್ನು ತಪ್ಪಾಗಿ ತಿಳಿದುಕೊಳ್ಳಬಾರದು. ಸೇವಾ ಸಹಕಾರ ಸಂಘದ ನೌಕರರ ಬಗ್ಗೆ ಕೇಳುತ್ತಿದ್ದೇನೆ. ನಾನು ಕೇಳುವಂಥಾದ್ದು ಸಂಘದ ನೌಕರರು ಸಸ್ಪೆಂಡ್ ಮಾಡುವ ಬಗ್ಗೆ

ಶ್ರೀ ಆರ್. ಎಲ್. ಜಾಲಪ್ಪ.—ಈ ವಿಷಯದ ಬಗ್ಗೆ ಅಷ್ಟು ವಿಷದವಾಗಿ ಮಾಹಿತಿ ಇಲ್ಲಿ ಇಲ್ಲ. ಸಾಯಂಕಾಲದೊಳಗೆ ಬೇಕಾದರೆ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ದುರುಪಯೋಗಪಡಿಸಿದ ವ್ಯಕ್ತಿಗಳು ಸಹಕಾರ ಇಲಾಖೆಗೆ ಸೇರಿದ ವ್ಯಕ್ತಿಗಳು, ಆ ಸಂಘದಲ್ಲಿ ಕೆಲಸ ಮಾಡುವ ನೌಕರರು

ಶ್ರೀ ಆರ್. ಎಲ್. ಜಾಲಪ್ಪ.—ನನ್ನಲ್ಲಿ ಇರುವ ವರದಿ ಪ್ರಕಾರ ಸರ್ಕಾರಿ ಅಧಿಕಾರಿಗಳು ಎಂದು ಇದೆ. ಇದರಲ್ಲಿ ಸಂಘದ ನೌಕರರು ಕೂಡ ಶಾಮೀಲಾಗಿದ್ದಾರೆ ಎಂದು ಹೇಳುವುದಕ್ಕೆ ನನ್ನಲ್ಲಿ ವಿವರ ಇಲ್ಲ, ಸಾಯಂಕಾಲದೊಳಗೆ ತಿಳಿಸುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಸಹಕಾರ ಸಂಘದ ನೌಕರರು, ಅಧಿಕಾರಿಗಳ ಜೊತೆ ಶಾಮೀಲಾಗಿ ನಡೆದುಕೊಂಡಿದ್ದಾರೆ. ಅಲ್ಲಿ ಯಾರು ತಪ್ಪು ಮಾಡಿದ್ದಾರೆ ಅವರು ಕೆಲಸದಲ್ಲಿದ್ದಾರೆ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಸಾಯಂಕಾಲದೊಳಗೆ ತಿಳಿಸುತ್ತೇವೆಂದು ಹೇಳಿದ್ದಾರೆ, ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

ಹೈದ್ರಾಬಾದ್ ಕರ್ನಾಟಕ ಪ್ರದೇಶದ ಕಂದಾಯ ಉಪ-ವಿಭಾಗಗಳು

೨೧೪. ಶ್ರೀ ಬಸವರಾಜ ಶಂಕರಪ್ಪ (ಬಸವಕಲ್ಯಾಣ).—ಕಂದಾಯ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ

(ಅ) ಹೈದ್ರಾಬಾದ್ ಕರ್ನಾಟಕದಲ್ಲಿ ಒಟ್ಟು ಕಂದಾಯ ಉಪ ವಿಭಾಗಗಳು ಇವೆ.

(ಆ) ಬೀದರ್ ಜಿಲ್ಲೆಯಲ್ಲಿ ಎಷ್ಟು ಇವೆ, ಅವು ಯಾವುವು,

(ಇ) ಬಸವಕಲ್ಯಾಣದಲ್ಲಿ ರೆವೆನ್ಯೂ ಸಬ್ ಡಿವಿಜನ್ ಮಂಜೂರಾತಿ ಮಾಡುವ ವಿಷಯ ಸರಕಾರದವರ ಗಮನದಲ್ಲಿದೆಯೆ,

(ಈ) ಹಾಗಿದ್ದಲ್ಲಿ, ಇನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಆರ್. ಎಲ್. ಜಾಲಪ್ಪ.—ಅಧ್ಯಕ್ಷರೆ, ಈ ಪ್ರಶ್ನೆಗೆ ಹೆಚ್ಚಿನ ವಿವರ ಕೊಡಬೇಕಾಗುತ್ತದೆ. ಆದ್ದರಿಂದ, ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಂಡಿದ್ದೆ. ರಿಟನ್ ಕನ್ವರ್ಟ್ ಮಾಡಿ ಎಂದು ಕೇಳಿಕೊಂಡಿದ್ದೆ. ಆದುದರಿಂದ ಇದನ್ನು ರಿಟನ್ ಆನ್ಸರ್‌ಗೆ ಕನ್‌ವರ್ಟ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ

ಅಧ್ಯಕ್ಷರು.—ಈಗ ಇದು ಪ್ರಶ್ನೋತ್ತರ ಪಟ್ಟಿಯಲ್ಲಿ ಸೇರಿದೆ.

ಶ್ರೀ ಆರ್ ಎಲ್. ಜಾಲಪ್ಪ.—ಇದರ ಬಗ್ಗೆ ನನ್ನಲ್ಲಿ ಮಾಹಿತಿ ಇಲ್ಲ. ನಾನು ಪರಸನಲ್ ಆಗಿ ಮಾನ್ಯ ಸದಸ್ಯರಲ್ಲಿ ಭಿನ್ನವಿಸಿಕೊಂಡಿದ್ದೇನೆ.

ಶ್ರೀ ಪಿ. ರಾಂದೇವ್.—ಅಧ್ಯಕ್ಷರೆ, ಇವೊತ್ತು ಏನಾಗಿದೆ, ಎಮರ್ಜೆನ್ಸಿ ಕಾಲದಿಂದ ಅನೇಕ ಹೌಸಿಂಗ್ ಸೊಸೈಟಿಗಳವರು ಹಗಲುದರೋಡೆ ಮಾಡುತ್ತಿದ್ದಾರೆ. ಕೋಟ್ಯಾಂತರ ರೂಪಾಯಿಗಳ ಸುಲಿಗೆ ಆಗುತ್ತಿದೆ, ಸೈಟುಗಳನ್ನು ಕೊಡುತ್ತಿಲ್ಲ ಇದರಿಂದ ಎಲ್ಲರಿಗೂ ತೊಂದರೆಯಾಗಿದೆ. ಸರ್ಕಾರ ಇದನ್ನು ಹತೋಟಿಯಲ್ಲಿ ಇಡಲಿಕ್ಕೆ ಆಗಲಿಲ್ಲ. ಎಂದರೆ ಇನ್ನು ಯಾರು ಹಿಡಿತದಲ್ಲಿಲಿಕ್ಕೆ ಆಗುತ್ತದೆ. ವಿಶ್ವಭಾರತಿ ಹೌಸಿಂಗ್ ಸೊಸೈಟಿಯಲ್ಲಿ ಕೃಷ್ಣ ಭಟ್ಟರು ೫-೬ ಕೋಟಿ ರೂಪಾಯಿಗಳನ್ನು ಕಲೆಕ್ಟ್ ಮಾಡಿದ್ದಾರೆ. ಯಾರಿಗೂ ಏನೂ ಮಾಡಿಲ್ಲ. ಸೊಸೈಟಿಗಳು ಬೇಕೆಂದು ಕೆಲವರು ಮಾಡಿಕೊಂಡಿದ್ದರೆ, ಆದರೆ ಇವೊತ್ತು ಅವುಗಳು ಸರ್ಕಾರದ ಹಿಡಿತದಲ್ಲಿಲ್ಲ. ಸರ್ಕಾರದ ಅಧಿಕಾರಿಗಳು ಯಾರು ಜಾಮೀಲಾಗಿದ್ದಾರೆ ಅಂಥವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಎಮರ್ಜೆನ್ಸಿಯಲ್ಲಿ ಮಾನ್ಯ ರಂಗನಾಥ್ ಅವರು ಮಾಡಿದಂಥ ಒಂದು ನಿದರ್ಶನ ಇದೆ. ಇವೊತ್ತು ಸೈಟು ಇಲ್ಲ, ಹಣ ಇಲ್ಲ, ಜನರಲ್ ಬಾಡಿ ಮಾಡುವು

ದಿಲ್ಲ ಲಕ್ಷಾಂತರ ಜನರು ಈ ಒಂದು ಪರಿಸ್ಥಿತಿಯಲ್ಲಿ ಸಿಕ್ಕಿಕೊಂಡಿದ್ದಾರೆ ಅವರಿಗೆ ರಕ್ಷಣೆಕೊಡುವವರು ಯಾರು ಇವೊತ್ತು ಯಾರು ಯಾರು ಹೌಸಿಂಗ್ ಸೊಸೈಟಿಗಳನ್ನು ನಡೆಸುತ್ತಿದ್ದಾರೆ ಅವರನ್ನು ಒಂದು ಹಿಡಿತದಲ್ಲಿಟ್ಟುಕೊಳ್ಳಿ, ಇಲ್ಲದೇ ಇದ್ದರೆ, ಸದಸ್ಯರ ಹಣವನ್ನು ವಾಪಸ್ಸು ಕೊಡುವಂತೆ ಮಾಡಬೇಕೆಂದು ಸರ್ಕಾರದಲ್ಲಿ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಒಂದೊಂದು ಹೌಸಿಂಗ್ ಸೊಸೈಟಿಗಳು ರಾಮಾಯಣ, ಮಹಾಭಾರತದ ತರಹ ಇದೆ. ಮಾನ್ಯ ರಾಮ್‌ದೇವ್ ಅವರು ಹೇಳಿದ್ದು ಅಕ್ಷರಶಃ ನಿಜ. ಇದನ್ನೆಲ್ಲಾ ಪರೀಕ್ಷೆ ಮಾಡಬೇಕಾದರೆ ಎಷ್ಟು ದಿವಸ ಆಗುತ್ತದೆಯೋ ಗೊತ್ತಿಲ್ಲ. ಇದರ ಬಗ್ಗೆ ಪೂರ್ಣ ವಿವರಗಳನ್ನು, ಮಾಹಿತಿಯನ್ನು ಶೇಖರಣೆ ಮಾಡಿ ಮಾನ್ಯ ಸದಸ್ಯರಿಗೆ ಒದಗಿಸುತ್ತೇನೆ. ಇದರಲ್ಲಿ ಸಹಕಾರಿ ಇಲಾಖೆಯ ಅಧಿಕಾರಿಗಳು ಭಾಗಿಯಾಗಿದ್ದರೆ, ಯಾವುದೇ ಕಾರಣದಿಂದ ರಕ್ಷಣೆ ಕೊಡುವುದಿಲ್ಲ ಎಂದು ಮಾನ್ಯ ಸದಸ್ಯರಿಗೆ ಭರವಸೆ ಕೊಡುತ್ತೇನೆ.

ಗುಲಬರ್ಗಾ ಜಿಲ್ಲೆಯಲ್ಲಿರುವ ಲಂಬಾಣಿ ತಾಂಡಾಗಳ ವಿದ್ಯುದ್ದೀಕರಣ

೨೪೫. ಶ್ರೀ ವಿಶ್ವನಾಥ್ ಪಾಟೀಲ್ ಹೆಬ್ಬಾಳ (ಚಿತ್ತಾಪುರ)*.—ಮಾನ್ಯ ಅಭ್ಯಾರಿ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಗುಲ್ಬರ್ಗಾ ಜಿಲ್ಲೆಯಲ್ಲಿರುವ ಲಂಬಾಣಿ ತಾಂಡಾಗಳ ಸಂಖ್ಯೆ ಎಷ್ಟು?

(ಆ) ಈ ತಾಂಡಾಗಳಿಗೆ ವಿದ್ಯುತ್ ಪೂರೈಕೆ ಮಾಡಲಾಗಿದೆಯೇ ಮತ್ತು ವಿದ್ಯುತ್ ಪೂರೈಕೆ ಹೊಂದಿರದ ತಾಂಡಾಗಳ ಸಂಖ್ಯೆ ಎಷ್ಟು?

ಶ್ರೀ ಜೆ. ಹೆಚ್. ಪಟೀಲ್ (ಅಬಕಾರಿ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

(ಅ) ೩೭೩ ಲಂಬಾಣಿ ತಾಂಡಾಗಳು (೩೦-೬-೮೩ರವರೆಗೆ)

(ಆ) ಇವುಗಳಲ್ಲಿ ೨೬ ತಾಂಡಾಗಳಿಗೆ ವಿದ್ಯುತ್ ಪೂರೈಕೆ ಮಾಡಿದೆ (೩೦-೬-೮೩ರವರೆಗೆ) ಉಳಿದ ೩೪೭ ತಾಂಡಾಗಳಿಗೆ ವಿದ್ಯುತ್ ಪೂರೈಕೆ ಆಗಬೇಕಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಗ್ರಾಮ ಲೆಕ್ಕಿಗರು

೨೬೨. ಶ್ರೀ ಪುತಾಪ ಚಂದ್ರ ಶೆಟ್ಟಿ(ಕುಂದಾಪುರ) ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಕಂದಾಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರು ಗ್ರಾಮ ಲೆಕ್ಕಿಗಳ ಸಂಖ್ಯೆ ಎಷ್ಟು(ತಾಲ್ಲೂಕುವಾರು ವಿವರಗಳನ್ನು)

ಆ) (೧) ಈ ಪೈಕಿ ಭರ್ತಿಮಾಡದೆ ಖಾಲಿ ಇರುವ ಹುದ್ದೆಗಳೆಷ್ಟು ;

(೨) ಮತ್ತು ಎರಡು ಮೂರು ಪಂಚಾಯಿತಿಗಳಿಗೆ ಇಂಚಾರ್ಜ್ ಇಟ್ಟಿರುವ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರ);

(೧) ಖಾಲಿ ಸ್ಥಳಗಳ ಬಗ್ಗೆ ಇನ್‌ಚಾರ್ಜ್ ;

(೨) ಅಮಾನತಿಯಿಂದ ಇನ್‌ಚಾರ್ಜ್;

ಇ) ಈ ರೀತಿ ಗ್ರಾಮ ಲೆಕ್ಕಿಗರ ಕೊರತೆಯಿಂದಾಗಿ ಜನರಿಗೆ ರೆವಿನ್ಯೂ ದಾಖಲೆಗಳನ್ನು ಪಡೆಯಲು ಮತ್ತು ಇನ್ನಿತರ ಸರಕಾರಿ ಕೆಲಸಗಳಿಗೆ ಅಡಚಣೆ ಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

---

*ಮಾನ್ಯ ಸದಸ್ಯರು ಹಾಜರಿರಲಿಲ್ಲ.